ಮಧುಗಿರಿಯ ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯದಲ್ಲಿ

**ಸಿ.ಸಿ. ಸಂಖ್ಯೆ 67/2025**

ಪ್ರ.ವ.ಬೋ.ತಾಃ 06-05-2026

ಚಾಸಾಃ 3 ಫ್ರಾಸಾಃ 3

| | |
|---|---|
| ಸಾಕ್ಷಿಯ ಹೆಸರು | ಬಿ.ಎನ್.ಸುಧಾಕರ್ ರಾವ್ |
| ತಂದೆ/ಗಂಡನ ಹೆಸರು | ಬಿ.ಎಸ್.ನಾಗೋಜಿ ರಾವ್ |
| ವಯಸ್ಸು | 50 ವರ್ಷ |
| ವೃತ್ತಿ | ವೆಲ್ಡಿಂಗ್ ವರ್ಕ್ ಶಾಪ್ ಕೆಲಸ |
| ವಾಸ | ಮಧುಗಿರಿ ಟೌನ್, ಮಧುಗಿರಿ ತಾ. |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ. ರವರಿಂದಃ-**

ವಿಡಿಯೋ ಕಾನ್ಫರೆನ್ಸ್ ಮೂಲಕ ತೋರತ್ತಿರುವ ಆರೋಪಿತರು ಗೊತ್ತು. ಈಗ ತೋರುತ್ತಿರುವ ಸ್ಥಳ ಪಂಚನಾಮೆಯಲ್ಲಿರುವ ಸಹಿ ನನ್ನದಾಗಿರುತ್ತದೆ. ಅದನ್ನು ನಿಪಿ.2 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಅದಕ್ಕೆ ನಾನು ದಿಃ 30.12.2024 ರಂದು ಚಾಸಾ.1 ಮತ್ತು 2 ರವರ ಮನೆಯ ಹತ್ತಿರ ಕಳ್ಳತನವಾದ ವಿಚಾರವಾದ ಬಗ್ಗೆ ಪೊಲೀಸರು ಪಂಚನಾಮೆ ಮಾಡಿ ನನ್ನ ಸಹಿ ಪಡೆದರು. ಆ ಸಮಯದಲ್ಲಿ ನನ್ನ ಜೊತೆ ಚಾಸಾ.6 ರವರು ಸ್ಥಳದಲ್ಲಿದ್ದರು. ಕೃತ್ಯ ನಡೆದ ಸ್ಥಳವನ್ನು ಚಾಸಾ.1 ರವರು ತೋರಿಸಿದರು. ಆ ಸ್ಥಳ ಪಂಚನಾಮೆಯನ್ನು ಬೆಳಗ್ಗೆ 11.00 ರಿಂದ 12.00 ಗಂಟೆಯವರೆಗೆ ಮಾಡಲಾಯಿತು. ಆ ಸಮಯದಲ್ಲಿ ಪೊಲೀಸರು ಎರಡು ಫೋಟೋಗಳನ್ನು ತೆಗೆದರು. ಆ ಫೋಟೋಗಳನ್ನು ನಿಪಿ.3 ಮತ್ತು 4 ಎಂದು ಈಗಾಗಲೇ ಗುರುತಿಸಲಾಗಿದೆ.

**<u>ಪಾಟೀ ಸವಾಲುಃ</u>- ಆರೋಪಿತರ ಪರವಾಗಿ ಶ್ರೀಮತಿ ಜಿ.ವಿ.ಹೆಚ್./ಎಲ್.ಎ.ಡಿ.ಸಿ. ವಕೀಲರಿಂದಃ-**

ನಾನು ಬೆಳಗಿನ ವಾಕಿಂಗ್ ಮಾಡಿಕೊಂಡು ಚಾಸಾ.1ರವರ ಮನೆಯ ಹತ್ತಿರ ಹೋದಾಗ ಪೊಲೀಸರು ಸ್ಥಳದಲ್ಲಿದ್ದು, ಆ ಸ್ಥಳ ಪಂಚನಾಮೆಗೆ ನನ್ನ ಸಹಿ ಪಡೆದರು. ಆ ದಿನ ಪೊಲೀಸರು ನನ್ನ ಸಮಕ್ಷಮ ಆ ಸ್ಥಳ ಪಂಚನಾಮೆಯನ್ನು ಬೆರಳಚ್ಚು ಮಾಡಿ ಪ್ರಿಂಟನ್ನು ಅಲ್ಲಿಯೇ ತೆಗೆದರು. ಆ ಸಮಯದಲ್ಲಿ ಒಟ್ಟು 4 ಜನ ಆ ಸ್ಥಳದಲ್ಲಿದ್ದು. ಆ ದಾಖಲೆಗೆ ನಾನು ಎಷ್ಟನೇ ವ್ಯಕ್ತಿಯಾಗಿ ಸಹಿ ಮಾಡಿದ್ದೇನೆ ಎಂಬುದು ನನಗೆ ಈಗ ನೆನಪಿಲ್ಲ. ಆ ಸಮಯದಲ್ಲಿ ಆರೋಪಿತರು ಆ ಸ್ಥಳದಲ್ಲಿ ಇರಲಿಲ್ಲ. ಘಟನಾ ಸ್ಥಳದ ಚೆಕ್ಕುಬಂಧಿ, ಪೂಃ ರಸ್ತೆ, ಪಃ ರಸ್ತೆ, ಉಃ ಶಂಕರಮಠ, ದಃ ಚಾಸಾ.1ರವರ ಮನೆ ಆಗಿರುತ್ತದೆ. ಆ ದಿನ ಪೊಲೀಸರು ಸ್ಥಳಕ್ಕೆ ಬಂದಿಲ್ಲ, ಯಾವುದೇ ಸ್ಥಳ ಪಂಚನಾಮೆ ಮಾಡಿಲ್ಲ, ನಾನು ಆ ದಾಖಲೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿತರು ಯಾವುದೇ ಕಳ್ಳತನ ಮಾಡದೇ ಇದ್ದರೂ ಸಹ ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u>- ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ